ತರೀಕೆರೆ ತಾಲ್ಲೂಕಿನಲ್ಲಿರುವ ಬಗರ್ ಹುಕುಂ ಸಾಗುವಳಿ ಬಗ್ಗೆ

೧೯೦೬. ಶ್ರೀ ಬಿ. ಆರ್ ನೀಲಕಂಠಪ್ಪ (ತರೀಕೆರೆ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತರೀಕೆರೆ ತಾಲ್ಲೂಕಿನಲ್ಲಿರುವ ಬಗರ್ ಹುಕುಂ ಸಾಗುವಳಿಯು ಜಮೀನೆಷ್ಟು ?

ಆ) ಸದರಿ ಜಮೀನನ್ನು ಸಾಗುವಳಿ ಮಾಡಿದವರಿಗೆ ಖಾಯಂ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—

ಅ) ತರೀಕೆರೆ ತಾಲ್ಲೂಕಿನಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿರುವ ಜಮೀನಿನ ವಿವರಣೆ ಈ ರೀತಿ ಇದೆ.—

	ಹರಿಜನ/ಗಿರಿಜನರು		ಇತರರು	
	ಸಂಖ್ಯೆ	ವಿಸ್ತೀರ್ಣ	ಸಂಖ್ಯೆ	ವಿಸ್ತೀರ್ಣ
ಸರ್ಕಾರಿ ಗೋಮಾಳದಲ್ಲಿ	೩೧೦	೮೩೨–೧೦	೧೧೦೨	೨೩೨೧–೦೪
ಕೆರೆ ದಂಡೆಯಲ್ಲಿ	೩೧	೩೮–೨೯	೮೩	೧೪೬–೨೮
ಅರಣ್ಯ ಭೂಮಿ ಸಿ ಮತ್ತು ಡಿ ವರ್ಗದ	೧೨೯	೨೬೦–೨೦	೧೯೫	೫೩೪–೩೦
ಭೂಮಿಯಲ್ಲಿ	೧೨೮	೨೪೭–೦೦	೩೮೧	೨೧೫೭–೦೦
ಒಟ್ಟು	೫೯೮	೧೩೭೮–೧೯	೧೭೬೧	೫೧೫೯–೨೨

ಆ) ಸದರೀ ಜಮೀನನ್ನು ಬಗರ್ ಹುಕ್ಕುಂ ಸಾಗುವಳಿ ಮಾಡಿರುವವರಿಗೆ ಖಾಯಂ ಮಾಡಲು ಬರುವುದಿಲ್ಲ. ಕಾರಣವೇನೆಂದರೆ ಮೇಲಿನ ಬಗರ್ ಹುಕ್ಕುಂ ಸಾಗುವಳಿ ಮಾಡಿರುವ ಭೂಮಿಗಳು ಸರ್ಕಾರಿ ಗೋಮಾಳ, ಕೆರೆಯ ದಂಡೆ ಅರಣ್ಯ ಭೂಮಿ ಮತ್ತು ಅರಣ್ಯಕ್ಕಾಗಿ ಕಾದಿರಿಸಿದ 'ಸಿ' ಮತ್ತು 'ಡಿ' ವರ್ಗದ ಭೂಮಿಗಳಾಗಿದ್ದು ಇವುಗಳನ್ನು ಸಕ್ರಿಯಗೊಳಿಸಲು ಆಗುವುದಿಲ್ಲ, ಮತ್ತು ಇವುಗಳಿಗೂ ಕಂದಾಯ ಇಲಾಖೆಗೂ ಸಂಬಂಧವಿರುವುದಿಲ್ಲ, ಅದಲ್ಲದೆ ಮೇಲೆ ಹೇಳಿದ ಸರ್ಕಾರಿ ಗೋಮಾಳವು ಸದರಿ ತಾಲ್ಲೂಕಿನಲ್ಲಿ ಅತಿ ಕಡಿಮೆ ಇರುವುದರಿಂದ ಸದರಿ ಗೋಮಾಳದಲ್ಲಿ ಮಾಡಿರುವ ಬಗರ್ ಹುಕ್ಕುಂ ಸಾಗುವಳಿಯನ್ನು ಸಕ್ರಿಯಗೊಳಿಸಲು ಬರುವುದಿಲ್ಲ.

ಬೀದರ್ ಜಿಲ್ಲೆಯಲ್ಲಿ ಲಂಬಾಣಿ ತಾಂಡಾಗಳಿಗೆ ವಿದ್ಯುತ್ ಒದಗಿಸುವ ಬಗ್ಗೆ

೧೯೬೩. ಶ್ರೀ ಬಸವರಾಜ ಪಾಟೀಲ್ (ಹುಮನಾಬಾದ್).— ಮಾನ್ಯ ವಿದ್ಯುಚ್ಛಕ್ತಿ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೀದರ್ ಜಿಲ್ಲೆಯಲ್ಲಿರುವ ಒಟ್ಟು ಲಂಬಾಣಿ ತಾಂಡಾಗಳೆಷ್ಟು ? ಹಾಗೂ ಇವುಗಳಲ್ಲಿ ಎಷ್ಟು ತಾಂಡಾಗಳಿಗೆ ವಿದ್ಯುತ್ ಪೂರೈಸಲಾಗಿದೆ ?

ಆ) ವಿದ್ಯುತ್ ಪಡೆಯದೆ ಇರುವ ತಾಂಡಾಗಳಿಗೆ ಸರಕಾರದವರು ಯಾವಾಗ ವಿದ್ಯುತನ್ನು ಒದಗಿಸುವರು ?

ಶ್ರೀ ಜೆ. ಎಸ್. ದೇಶಮುಖ್ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ಬೀದರ್ ಜಿಲ್ಲೆಯಲ್ಲಿ ಒಟ್ಟು ೧೨೧ ಲಂಬಾಣಿ ತಾಂಡಾಗಳಿವೆ ಅವುಗಳಲ್ಲಿ ದಿನಾಂಕ ೩೧-೧-೮೬ ರವರೆಗೆ ೧೩ ತಾಂಡಾಗಳಿಗೆ ವಿದ್ಯುತ್ ಪೂರೈಕೆ ಮಾಡಲಾಗಿದೆ. ಒಂದನ್ನು ೩೧ರ ಮಾರ್ಚ್ ೮೬ರ ಒಳಗೆ ವಿದ್ಯುದ್ದೀಕರಣಗೊಳಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.

ಆ) ವಿದ್ಯುತ್ ಪಡೆಯದೇ ಇರುವ ಲಂಬಾಣಿ ತಾಂಡಾಗಳ ಪೈಕಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಗ್ರಾಮಾಂತರ ವಿದ್ಯುದ್ದೀಕರಣ ನಿಗಮದ ವಿಶೇಷ ವ್ಯವಸಾಯ ಯೋಜನೆಗಳ (Special Agricultural Scheme) ಅಡಿಯಲ್ಲಿ ಆದಷ್ಟು ಹೆಚ್ಚು ತಾಂಡಾಗಳನ್ನು ದೊರಕುವಿಕೆಯ ಸಾಮಗ್ರಿಗಳನ್ನು ಮತ್ತು ಸಂಪನ್ಮೂಲಗಳನ್ನು ಅನುಸರಿಸಿ ಹಂತ ಹಂತವಾಗಿ ವಿದ್ಯುದ್ದೀಕರಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

Jamma land in Kodagu District

1642. SRI D. A CHINNAPPA (Madikere).—Will the Minister for Revenue and Planning be pleased to state.—

a) whether it is a fact that the peaple of Kodogu are the owners of Jamma Lands.,

b) whether they are also aware that these Jamma lands were sold by the owners on payment of Nazarana of 20% to the Government till 1982,

c) the reasons for not according permission to sell the same now,

d) whether a decision has been taken by the Government after obtaining the views of the people of Kodagu at Madikeri,

e) if so the decision taken and the reasons for the delay ?

SRI S. R. BOMMAI (Minister for Revenue and Planning).—

a) It is a fact that the people of Kodagu are the owners of the Jamma lands.

b) Yes. These Jamma lands were sold by the owners on payment of Nazarana of 20% till 1982.

c) According to the instructions of the Government, permission is not being according to sell these Jamma lands now.

d) No decision has been taken by the Government in this behalf

e) Does not arise.

ಅಧ್ಯಕ್ಷರು.—ನಿಯಮ ೧೯೦ರ ಮೇರೆಗೆ ಹಕ್ಕು ಚ್ಯುತಿ ಆಗಿರುವ ಬಗ್ಗೆ ಶ್ರೀ ಆರ್. ವೆಂಕಟರಾಮಯ್ಯ ಅವರು ಒಂದು ಸೂಚನೆಯನ್ನು ಕಳುಹಿಸಿದ್ದಾರೆ. ವಿರೋಧಪಕ್ಷದ ನಾಯಕರಾದ ಶ್ರೀ ಎಸ್. ಬಂಗಾರಪ್ಪ ಅವರ ವಿರುದ್ಧ ಒಂದು ಹಕ್ಕು ಚ್ಯುತಿ ಸೂಚನೆಯನ್ನು ಮಾನ್ಯ ಮುಖ್ಯ ಮಂತ್ರಿಯವರಾದ ಶ್ರೀ ರಾಮಕೃಷ್ಣ ಹೆಗಡೆಯವರು ಕೊಟ್ಟಿದ್ದಾರೆ. ನಾನು ಈ ಸೂಚನೆಯನ್ನು ಕೂಲಂಕಷವಾಗಿ ಪರಿಶೀಲಿಸುತ್ತಿದ್ದೇನೆ. ಈ ಬಗ್ಗೆ ಸಂಬಂಧಪಟ್ಟ ಕಾಗದಪತ್ರಗಳನ್ನು ಮತ್ತು ನಿಯಮಾವಳಿಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ ಕಾಲಕ್ರಮದಲ್ಲಿ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳುತ್ತೇನೆ.